

ಮೇಲಿಂದ ಬಿದ್ದ ಗೋವಿಗೆ ನೀರು ಕುಡಿಸುತ್ತಿರುವ ಶುಕೂರ್ ಮತ್ತವರ ತಂಡದ ಸದಸ್ಯರು



ನೋಡನೋಡುತ್ತಿದ್ದಂತೆ ಮೇಲಿನಿಂದ ಕಾಲು ಜಾರಿ ಬಿದ್ದು ಸತ್ತ ಗೋವು



ಗೋವುಗಳ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಂಡದ ಸದಸ್ಯರು

ಎಂಬುದಕ್ಕೆ ಪುರಾವೆಗಳಿವೆ. ಬೆಟ್ಟಗಳ ಬಂಡೆಗಳ ಕೆಳಗೆ ಆದಿಮಾನವ ರಚಿಸಿದ ಕಲಾಕೃತಿಗಳಿವೆ. ವಳಕಲ್ಲಿಗೆ ತಂದು ಬಿಡುವುದೇ ತಡ, ಗೋವುಗಳು ಸುತ್ತಲಿನ ಬೆಟ್ಟಗಳನ್ನು ಹತ್ತಿ ಮೇಯಲು ಶುರು ಮಾಡುತ್ತವೆ. ಹೀಗೆ ಮೇಯುವ ಭರದಲ್ಲಿ ನಾಲ್ಕು ಗೋವುಗಳು ಒಣ ಹುಲ್ಲನ್ನು ಅರಸಿ ಕಡಿದಾದ ಇಳಿಜಾರಿನ ಪ್ರದೇಶವೊಂದರಲ್ಲಿ ಸಿಕ್ಕಿಹಾಕಿಕೊಂಡಿವೆ. ಇದನ್ನು ತಿಳಿಯದ ದನಗಾಹಿಗಳು ಎಂದಿನಂತೆ ಗೋವುಗಳನ್ನು ಅಟ್ಟಿಕೊಂಡು ಗೋಶಾಲೆಗೆ ಬಂದಿದ್ದಾರೆ. ವಾಡಿಕೆಯಂತೆ ಗೋವುಗಳನ್ನು ಕೊಟ್ಟಿಗೆಗಳಲ್ಲಿ ಕಟ್ಟಿ, ಹಾಲು ಕರೆದುಕೊಂಡಿದ್ದಾರೆ. ಶುಕೂರ್ ಹಾಗೂ ಇಬ್ರಾಹಿಂ ಸುದ್ದಿ ಮುಟ್ಟಿಸುವವರೆಗೂ ನಾಲ್ಕು ಗೋವುಗಳು ಕಾಣೆಯಾದ ವಿಷಯ ಗೋಶಾಲೆಯವರ ಗಮನಕ್ಕೆ ಬಂದಿರಲೇ ಇಲ್ಲ.

ವಳಕಲ್ಲಿನ ಆ ಬೆಟ್ಟ ನೆಲಮಟ್ಟದಿಂದ ಸುಮಾರು 350 ಅಡಿ ಎತ್ತರವಿದೆ. ಗೋವುಗಳು ಸಿಕ್ಕಿಹಾಕಿಕೊಂಡಿದ್ದ ಪ್ರದೇಶ ಸುಮಾರು 300 ಅಡಿ ಎತ್ತರದಲ್ಲಿದೆ. ಆ ಅಪಾಯಕಾರಿ ಸ್ಥಳ ಮುಟ್ಟಿದ ಕಾರ್ಯಾಚರಣೆ ತಂಡದ 6 ಜನ ಮೊದಲು ಗೋವುಗಳು ಇರುವ ಕಡೆ ತೆವಳುತ್ತಾ ನಿಧಾನವಾಗಿ ಇಳಿದರು. ನಾಲ್ಕು ಹಸುಗಳನ್ನು ಹತ್ತಿರಕ್ಕೆ ಕರೆದು ತಾವು ಕೊಂಡೊಯ್ದಿದ್ದ ಹಿಂಡಿ ತಿನ್ನಿಸಿ, ನೀರು ಕುಡಿಸಿದರು. ಐದು ದಿನದಿಂದ ಆಹಾರ, ನೀರಿಲ್ಲದೆ ನಿತ್ರಾಣಗೊಂಡಿದ್ದ ಗೋವುಗಳು ಸ್ವಲ್ಪ ಚೇತರಿಕೆ ಕಂಡವು. ಬಳಿಕ ಗೋವೊಂದಕ್ಕೆ ಹಗ್ಗ ಕಟ್ಟಲಾಯಿತು. ಉಳಿದ ಸದಸ್ಯರು ಹಸುವನ್ನು ಹುಷಾರಾಗಿ ಮೇಲಕ್ಕೆ ಎತ್ತತೊಡಗಿದರು. ಮೊದಲ ಗೋವು ಸಣ್ಣ ಪುಟ್ಟ ಗಾಯಗಳೊಂದಿಗೆ ಮೇಲೆ ಬಂತು. ಅದೇ ತೆರನಾಗಿ ಎರಡನೇ ಗೋವನ್ನೂ ಮೇಲಕ್ಕೆ ತರಲಾಯಿತು. ಅಷ್ಟರಲ್ಲಾಗಲೇ ಮಧ್ಯಾಹ್ನ 1 ಗಂಟೆಯಾಗಿತ್ತು. ಇನ್ನೊಂದು ಗಂಟೆಯಲ್ಲಿ ಉಳಿದ ಎರಡೂ ಗೋವುಗಳನ್ನು ಮೇಲಕ್ಕೆ ತರಬಹುದು ಎನ್ನುವ ಲೆಕ್ಕಾಚಾರದ ಹುರುಪಿನಲ್ಲಿ ತಂಡದ ಸದಸ್ಯರಿದ್ದರು. ಆದರೆ ಅವರ ಸಂತೋಷ ಬಹಳ ಕಾಲ ಇರಲಿಲ್ಲ.

ಎರಡನೇ ಹಂತದ ಕಾರ್ಯಾಚರಣೆಗೆ ತಂಡದ 6 ಜನ ಗೋವುಗಳಿರುವ ಕಡೆ ಇಳಿದರು. ಹೆದರಿದ ಆ ಗೋವುಗಳು ಏಕಾಏಕಿ ಗಾಬರಿಗೊಂಡು ಮತ್ತಷ್ಟು ಕಡಿದಾದ ಪ್ರದೇಶಕ್ಕೆ ತೆರಳಿದವು. ನೋಡ ನೋಡುತ್ತಿದ್ದಂತೆ ಕಾಲು ಜಾರಿ ಸುಮಾರು 300 ಅಡಿ ಪ್ರಪಾತಕ್ಕೆ ಬಿದ್ದವು. ಸದಸ್ಯರು ಅಲ್ಲಿಗೂ ಧಾವಿಸಿದರು. ಅಷ್ಟರಲ್ಲಾಗಲೇ ಒಂದು ಗೋವು ಅಸು ನೀಗಿತ್ತು. ಮತ್ತೊಂದು ಒದ್ದಾಡುತ್ತಿತ್ತು. ಪ್ರಾಣ ಉಳಿಸಲು ಸದಸ್ಯರು ಅದಕ್ಕೆ ನೀರು ಕುಡಿಸುವ ಪ್ರಯತ್ನ ಮಾಡಿದರೂ ಅದು ಫಲ ಕೊಡಲಿಲ್ಲ.

ಗೋಶಾಲೆಯ ಸದಸ್ಯರು ಮೃತಪಟ್ಟ ಆ ಎರಡು ಗೋವುಗಳನ್ನು ಅಲ್ಲೇ ಮಣ್ಣು ಮಾಡಿದರು. ಸುಮಾರು ಎರಡು ಗಂಟೆಗಳ ಕಾಲ ನಡೆದ ರಕ್ಷಣಾ ಕಾರ್ಯ ಮಿಶ್ರಫಲ ನೀಡಿತ್ತು. ಎರಡು ಗೋವುಗಳನ್ನು ಕಾಪಾಡಿದ ತೃಪ್ತಿಗಿಂತ, ಎರಡು ಗೋವುಗಳನ್ನು ಕಳೆದುಕೊಂಡೆವಲ್ಲ ಎಂಬ ದುಃಖ ತಂಡದ ಸದಸ್ಯರಲ್ಲಿ ಮನೆ ಮಾಡಿತ್ತು. ಫಲಿತಾಂಶ ಏನೇ ಇರಲಿ, 'ಗೋ ರಾಜಕಾರಣ'ದ ಕಾಲಘಟ್ಟದಲ್ಲಿ ಮುಸ್ಲಿಂ ಯುವಕರು ಭಾಗವಹಿಸಿದ್ದ ಆ ಕಾರ್ಯಾಚರಣೆ ಧಾರ್ಮಿಕ ಸಾಮರಸ್ಯದ ಕಾರಣದಿಂದಾಗಿ ಮಹತ್ವವಾದುದು.

ಚಿತ್ರಗಳು ಲೇಖಕರವು.

ಪ್ರತಿಕ್ರಿಯಿಸಿ: feedback@sudha.co.in